
ಪಾದವೆತ್ತಿ ತನ್ನ ತಲೆಯ ಮೇಲೆ ಇಟ್ಟಂತಾಗುತ್ತದೆ, ಅವನು ತಳಮಳಗೊಳ್ಳುತ್ತಾನೆ. ತಾಯಿಯ ಸಹಜ ಆಸೆ, ತನ್ನ ಜೀವನದರ್ಶನ, ಹೊರಗಿನಿಂದ ಹೇರಲಾದ ಅಪೇಕ್ಷೆಗಳು ಮತ್ತು ರಾಜಕೀಯ ಒಳಸುಳಿಗಳ ಮಧ್ಯೆ ಭರತ ತೀವ್ರ ಸಂಕಟ ಅನುಭವಿಸುತ್ತಾನೆ. ಸ್ವಂತ ಬಯಕೆಯಂತೆ ಬದುಕಲಾಗದ ಸ್ಥಿತಿಯಲ್ಲಿ ತೊಳಲಾಡುತ್ತಾನೆ. ಅವನು ಕೈಕೇಯಿಯ ಮಗ, ಮಾಂಡವಿಯ ಪತಿ, ರಾಮನ ತಮ್ಮ ಆಗಿ ಉಳಿಯದೇ ತನ್ನತನದ ಹುಡುಕಾಟದಲ್ಲಿ ತೊಡಗಿದ್ದಾನೆ. ತನಗೆ ಅರಿವಿಲ್ಲದೇ ಧುತ್ತೆಂದು ಒಂದು ಸಂಕೀರ್ಣ ಸನ್ನಿವೇಶಕ್ಕೆ ತಳ್ಳಲ್ಪಡುವ ಭರತನದ್ದು ಅಸ್ತಿತ್ವವಾದಿ ಹುಡುಕಾಟವಾಗಿ ಕಾಣುತ್ತದೆ. ಈ ಹುಡುಕಾಟದಲ್ಲಿ ನಿರಂತರವಾಗಿ ಎಚ್ಚರದಿಂದ ಯೋಚಿಸುವ ವ್ಯಕ್ತಿಯಾಗಿ ಅವನು ಕಂಡುಕೊಂಡದ್ದು ಏನು ಎಂಬ ಪ್ರಶ್ನೆಯೇ ಈ ಕೃತಿಯನ್ನು ಮುನ್ನಡೆಸಿದೆ.

ಭರತ ಕಟ್ಟಬಯಸಿದ ಆದರ್ಶ ರಾಜ್ಯ ಎಂಥದ್ದು ಎಂಬುದು, ನಾವು ಯಾವುದನ್ನು ಇಂದು ಕಲ್ಯಾಣ ರಾಜ್ಯ (ವೆಲ್‌ಫೇರ್ ಸ್ಟೇಟ್) ಎಂದು ಕರೆಯುತ್ತೇವೆಯೋ ಅದಕ್ಕೆ ಹತ್ತಿರವಾದದ್ದು. ಕೃತಿಯಲ್ಲಿ ಬರುವ 'ಎಲ್ಲರೂ ನಿರ್ಭೀತಿಯಿಂದ ಬದುಕುವಂತಾಗಬೇಕು. ಯಾರನ್ನು ಯಾರೂ ಹಿಂಸಿಸಬಾರದು' ಎಂಬ ಅವನ ಮಾತು ಇದನ್ನು ಸಾರುತ್ತದೆ. ಇಲ್ಲಿ ಎಲ್ಲರೂ ನಾಯಕರು. ಶ್ರಮಕ್ಕೆ ಆದ್ಯತೆ, ಎಲ್ಲರ ತಿಳಿವಿಗೆ ಮನ್ನಣೆ, ಮುಕ್ತತೆ, ಆರೋಗ್ಯಕರ ಮನಸ್ಥಿತಿ ಇರುವ ಪರಿಸರವನ್ನು ಇದು ಹೇಳುತ್ತದೆ. ವಿದ್ವಾಂಸರಾದ ಇರಾವತಿ ಕರ್ವೆಯವರು ರಾಮಾಯಣ ಒಂದು ಕಾವ್ಯ ಎನ್ನುತ್ತಾ, ಅದು ಆದರ್ಶವನ್ನು ತಿಳಿಯಪಡಿಸಲು ರಚಿತವಾದ ಕಾವ್ಯ ಎನ್ನುತ್ತಾರೆ.

ಅಯೋಧ್ಯೆಯ ರಾಜಪ್ರಭುತ್ವದ ಒಳಗಿದ್ದ ಜೀವವಿರೋಧಿ ಸಂಗತಿಗಳನ್ನು ಬಹಳ ಸೂಕ್ಷ್ಮವಾಗಿ ಮನಗಾಣಿಸುತ್ತಾ ಭರತ ಅದನ್ನು ಗುರುತಿಸಿ ನಿವಾರಿಸಲು ನಡೆಸಿದ ಯತ್ನ ಇಲ್ಲಿ ಮುಖ್ಯವಾದುದು. ಹೆಣ್ಣಿನ ಮೇಲಿನ ಹಿಂಸೆಯ ನಾನಾ ವಿಧಗಳು ಅಧಿಕಾರ, ವಂಶಗೌರವದ ಹೆಸರಿನಲ್ಲಿ ಮಾನ್ಯವಾಗಿದ್ದವು. ಜೊತೆಗೆ, ಬುಡಕಟ್ಟು ಸಮುದಾಯಗಳ ನಂಬಿಕೆಗಳನ್ನು ಅಧಿಕಾರ ಮನ್ನಿಸದೇ ಇರುವುದು, ಉಳ್ಳವರು ಇಲ್ಲದವರನ್ನು ಶೋಷಿಸುವ ಸ್ಥಿತಿ, ಇದೆಲ್ಲವನ್ನೂ ಗಮನಿಸಿದ ಭರತ,




**ಲೇ: ಆರ್. ಸುನಂದಮ್ಮ**
ಪುಟ:464, ಬೆಲೆ: ₹ 395
ಪ್ರ: ಸಪ್ನ ಬುಕ್ ಹೌಸ್, ಬೆಂಗಳೂರು
ಫೋನ್: 080– 40114455 /33